ಸ್ಪಾನಿಶ್ ಮತ್ತು ಪಾಶ್ಚಾತ್ಯ ನಿರ್ಮಾಣ ಕಲೆ ಹಾಗೂ ಕಟ್ಟಡಗಳು

ಸ್ಪೈಯಿನ್‌ನಲ್ಲಿ ಮುಸ್ಲಿಮರು ನಿರ್ಮಾಣ ಕಲೆಯ ಕಾಲವು ಸುಮಾರು ಏಳು ಶತಮಾನಗಳನ್ನು ಆವರಿಸಿದೆ. ಅದು ಕ್ರಿಸ್ತ ಶಕ ಎಂಟನೆಯ ಶತಮಾನದಲ್ಲಿ ಕಾರ್ಡೋಬ ಜಾಮಿಅ ಮಸೀದಿಯ ನಿರ್ಮಾಣದಿಂದ ಹಿಡಿದು ಹದಿನೈದನೆಯ ಶತಮಾನದಲ್ಲಿ ಗ್ರೆನೇಡಾದ ಅಲ್ ಹಮ್ರಾ ಮಹಲಿನ ನಿರ್ಮಾಣ ಪೂರ್ಣಗೊಳ್ಳುವ ಕಾಲದ ವರೆಗೆ ಹರಡಿತ್ತು. ಈ ಅವಧಿಯಲ್ಲಿ ನೂರಾರು ಕಟ್ಟಡಗಳು ಉದಾರಣೆಗೆ: ಸ್ನಾನಗೃಹ, ಮಹಲುಗಳು, ಮಸೀದಿಗಳು, ಸಮಾಧಿಗಳು, ಮದ್ರಸಾಗಳು, ಸೇತುವೆಗಳು ಇತ್ಯಾದಿ ನಿರ್ಮಾಣಗೊಂಡುವು. ಇವುಗಳ ಕುರಿತು ವಿವರವಾಗಿ ಉಲ್ಲೇಖಿಸುತ್ತಾ ಹೋದರೆ ಒಂದು ಸ್ಥೂಲವಾದ ಗ್ರಂಥ ರಚನೆಯಾದೀತು.

ಸ್ಪೈಯಿನಿನಲ್ಲಿ ಮುಸ್ಲಿಮರ ನಿರ್ಮಾಣ ಕಲೆಯ ಕುರಿತು ಅಧ್ಯಯನ ನಡೆಸುವಾಗ, ಒಂದು ಮಾತನ್ನು ನೆನಪಿನಲ್ಲಿರಿಸಬೇಕಾಗಿದೆ; ಇಲ್ಲಿನ ಮುಸ್ಲಿಮ್ ಅರಸರು ಮತ್ತು ಪ್ರಜೆಗಳಲ್ಲಿ ಹೆಚ್ಚಿನವರು ಪುರಾತನ ಸಂಸ್ಕೃತಿಯನ್ನು ಇದಮಿತ್ಥಂ ಅನುಕರಿಸುವುದರ ಬದಲು ಹೊಸದಾದ ಒಂದು ಸಂಸ್ಕೃತಿಯನ್ನು ಹುಟ್ಟು ಹಾಕಿದರು. ತತ್ಪರಿಣಾಮವಾಗಿ ಒಂದು ನೂತನವಾದ ಸಮಾಜವು ಅಸ್ತಿತ್ವಕ್ಕೆ ಬಂತು. ಈ ನೂತನ ಸಂಸ್ಕೃತಿಯ ಪ್ರಭಾವಗಳು ಅವರ ನಿರ್ಮಾಣಗಳಲ್ಲಿ ಕಾಣತೊಡಗಿತ್ತು. ಸ್ಪೈಯಿನಿನ ಕೆಲವು ಸ್ಮರಣೀಯ ಕಟ್ಟಡಗಳು ಈ ಪ್ರಕಾರ ಇವೆ:

ಕಾರ್ಡೋಬದ ಜಾಮಿಅ ಮಸೀದಿ: ಅಮೀರ್ ಅಬ್ದುರ್ರಹ್ಮಾನ್ ಅವ್ವಲುಲ್ ಮಅ್‌ರೂಫ್ ಬಿದ್ದಾಖಿಲ್ (ಕ್ರಿ.ಶ. 756–788) ಆಂತರಿಕ ಕ್ಷೋಭೆಗಳನ್ನು ನಿಯಂತ್ರಿಸಿದ ಮೇಲೆ ಬಾಹ್ಯ ಅಪಾಯಗಳನ್ನೂ ನೀಗಿಸುವ ಸೂಕ್ತ ಬಂದೋಬಸ್ತು ಮಾಡಿದ ಮೇಲೆ ಮೊತ್ತ ಮೊದಲಿಗೆ ಈ ಮಸೀದಿಯ ನಿರ್ಮಾಣದ ಕುರಿತು ಆಲೋಚಿಸಿದನು. ಆತನು ತನ್ನ ಮರಣಕ್ಕೆ ಕೇವಲ ಎರಡು ವರ್ಷಗಳ ಹಿಂದೆ ಇದರ ನಿರ್ಮಾಣ ಕಾರ್ಯವನ್ನು ಆರಂಭಿಸಿದನು. ಡಮಸ್ಕಸ್‌ನ ಅಮವಿ ಜಾಮಿಅ ಮಸೀದಿಗೆ ಸರಿಸಾಟಿಯಾದಂತಹ ಒಂದು ಮಸೀದಿಯನ್ನು ಕಟ್ಟಿಸಿ, ಸ್ಪೈಯಿನ್ ಮತ್ತು ಪಶ್ಚಿಮಕ್ಕೆ ಒಂದು ಹೊಸದಾದ ಕೇಂದ್ರವನ್ನು ದೊರಕಿಸಿ ಕೊಡುವುದು ಅಮೀರ್‌ನ ಇಚ್ಛೆಯಾಗಿತ್ತು. ಇದೇ ಕಾರಣವಾಗಿ ಅದರ ನಿರ್ಮಾಣದ ಮೇಲ್ನೋಟವನ್ನು ಸ್ವತಃ ವಹಿಸಿದ್ದನು.

ಮಸೀದಿಯ ಆವರಣ ಗೋಡೆಗಳು ಎಷ್ಟು ಉನ್ನತ ಮತ್ತು ಶಕ್ತಿಶಾಲಿಯಾಗಿದ್ದುವೆಂದರೆ, ಅವು ನಗರದ ಆವರಣ ಗೋಡೆಯೋ ಎಂಬಂತೆ ತೋರುತ್ತಿದ್ದುವು. ಮಸೀದಿಯ ಛಾವಣಿಯು ಅನೇಕ ಕಂಬಗಳ ಮೇಲೆ ನೆಲೆ ನಿಂತಿದೆ. ಆ ಕಂಬಗಳ ಸಾಲಿನ ಎರಡೂ ಬದಿಗಳಲ್ಲಿ ಸಮಪ್ರಮಾಣದ ರಸ್ತೆಗಳು ಉಂಟಾಗುವ ರೀತಿಯಲ್ಲಿ ಅವುಗಳನ್ನು ಕಟ್ಟಿಸಲಾಗಿದೆ. ಆ ಕಂಬಗಳೆಲ್ಲವೂ ಅತ್ಯಂತ ಮನಮೋಹಕವಾದ ಕಮಾನುಗಳಿಂದ ಪರಸ್ಪರ ಜೋಡಿಕೊಂಡಿವೆ. ಈ ಕಮಾನುಗಳು ಪ್ರಸ್ತುತ ಭವ್ಯ ಮಸೀದಿಯ ಪ್ರತ್ಯೇಕತೆಗೆ ಕಾರಣವಾಗಿರುವುದಷ್ಟೇ ಅಲ್ಲ, ಸ್ಪಾನಿಶ್ ನಿರ್ಮಾಣ ಕಲೆಯ ಹೆಗ್ಗುರುತಾಗಿಯೂ ಮಾರ್ಪಟ್ಟಿವೆ. ಕಾರ್ಡೋಬ ಜಾಮಿಅ ಮಸೀದಿಯ ಈ ಕಂಬಗಳ ನಡುವೆ ಎರಡೆರಡು ಕಮಾನುಗಳಿವೆ. ಅಂದರೆ ಒಂದು ಕಮಾನಿನ ಮೇಲೆ ಇನ್ನೊಂದು ಕಮಾನು ಸ್ಥಾಪಿಸಿ ಛಾವಣಿಗೆ ಸೇರಿಸಲಾಗಿದೆ. ಆ ಕಮಾನುಗಳಲ್ಲಿ ಅಲ್ಲಲ್ಲಿ ಗುಂಬಜಗಳನ್ನು ಮಾಡಲಾಗಿತ್ತು. ಅವುಗಳ ಪೈಕಿ ಕೆಲವು ಈಗಲೂ ಅಸ್ತಿತ್ವದಲ್ಲಿವೆ. ಛಾವಣಿಯು ನೆಲದಿಂದ ಸುಮಾರು ಮುವ್ವತ್ತು ಅಡಿಯಷ್ಟು ಎತ್ತರದಲ್ಲಿತ್ತು. ಅದರ ಕಾರಣವಾಗಿ ಮಸೀದಿಯಲ್ಲಿ ಗಾಳಿ ಮತ್ತು ಬೆಳಕು ಬಹಳ ವಿಪುಲವಾಗಿ ಹರಿದಾಡುತ್ತಿತ್ತು. ಛಾವಣಿಯಲ್ಲಿ ಇನ್ನೂರ ಎಂಭತ್ತು ಮಿನುಗುವ ನಕ್ಷತ್ರಗಳನ್ನು ರಚಿಸಲಾಗಿತ್ತು. ಅವುಗಳಲ್ಲಿ ಒಳಾಂಗಣ ಪಡಸಾಲೆಯ ನಕ್ಷತ್ರಗಳು ಅಪ್ಪಟ ಬೆಳ್ಳಿಯದ್ದಾಗಿತ್ತು. ಅದಲ್ಲದೆ ಛಾವಣಿಯು

ವಿವಿಧ ಕಟ್ಟಿಗೆಯ ಪಟ್ಟಿಗಳಿಂದ ಅಲಂಕರಿಸಲಾಗಿತ್ತು. ಪ್ರತಿಯೊಂದು ಪಟ್ಟಿಯಲ್ಲೂ ವಿಭಿನ್ನ ರೂಪದ ಕೆತ್ತನೆಯಿತ್ತು. ಮಸೀದಿಯ ಮಧ್ಯಭಾಗದಲ್ಲಿ ತಾಮ್ರದ ಒಂದು ದೊಡ್ಡ ಗೊಂಚಲನ್ನು ಪ್ರತಿಷ್ಠಾಪಿಸಲಾಗಿತ್ತು. ಅದರಲ್ಲಿ ಏಕಕಾಲಕ್ಕೆ ಸಾವಿರ ದೀಪಗಳು ಉರಿಯುತ್ತವೆ. ವಿಶೇಷ ಪಡಸಾಲೆಯ ಬಾಗಿಲಲ್ಲಿ ಚಿನ್ನದ ಕುಸುರಿ ಕೆಲಸವನ್ನು ಮಾಡಲಾಗಿತ್ತು. ಅದೇ ವೇಳೆ ಮಿಹ್ರಾಬ್ ಮತ್ತು ಅದಕ್ಕೆ ತಾಗಿಕೊಂಡಿರುವ ಗೋಡೆಗಳೂ ಚಿನ್ನ ಲೇಪಿತವಾಗಿದ್ದುವು. ಅಮೃತಶಿಲೆಯ ಕಂಬಗಳಲ್ಲಿ ಚಿನ್ನದ ಕುಸುರಿಯಿಂದ ಅಲಂಕಾರವನ್ನು ಅತ್ಯಂತ ಸೊಗಸಾಗಿ ಮಾಡಲಾಗಿತ್ತು.

ಅಬ್ದುರ್ರಹ್ಮಾನ್ ಅದ್ದಾಖಿಲ್‌ನ ಬಳಿಕ ಆಡಳಿತ ಚುಕ್ಕಾಣಿ ಹಿಡಿದ ಅಮೀರ್ ಹಿಶಾಮ್ ಅವ್ವಲ್ (788–796) ಕೂಡ ಈ ಮಸೀದಿಯ ನಿರ್ಮಾಣ ಮತ್ತು ವಿಸ್ತರಣೆಯ ಕಾರ್ಯವನ್ನು ಜಾರಿಯಲ್ಲಿರಿಸಿದ. ಅವನಂತೂ ತನ್ನ ಏಳು ವರ್ಷಗಳ ಆಡಳಿತಾವಧಿಯಲ್ಲಿ ಸಮರಾರ್ಜಿತ ಸೊತ್ತಿನ ಐದನೆಯ ಒಂದು ಭಾಗವನ್ನು ಮಸೀದಿಯ ನಿರ್ಮಾಣದಲ್ಲಿ ಖರ್ಚು ಮಾಡಿದ. ಪ್ರಸ್ತುತ ಭವ್ಯ ಮಸೀದಿಯ ನಾಲ್ದೆಸೆಗಳಲ್ಲಿ ನಿರ್ಮಿಸಲಾಗಿರುವ ವೈಭವಯುತ ಮಿನಾರಗಳನ್ನೂ ಇದೇ ಕಾಲದಲ್ಲಿ ನಿರ್ಮಿಸಲಾಗಿತ್ತು. ಈ ಮಿನಾರಗಳು ಜಗತ್ತಿನ ಅದ್ಭುತಗಳಲ್ಲಿ ಗಣಿಸಲ್ಪಡುತ್ತವೆ.

ವಸ್ತುತಃ ಈ ಯುಗದ ಏಕೈಕ ಮಸೀದಿಯ ನಿರ್ಮಾಣ ಕಾರ್ಯವು ಮುಕ್ತಾಯಗೊಳ್ಳಲು ಮಾಸ, ಸಂವತ್ಸರಗಳಲ್ಲ ಶತಮಾನಗಳೇ ತಗುಲಿದ್ದುವು. ಪ್ರತಿಯೋರ್ವ ಅಮೀರನೂ ತನ್ನ ಸಾಮರ್ಥ್ಯ ಮತ್ತು ಆಸಕ್ತಿಗೆ ತಕ್ಕಂತೆ ಅದಕ್ಕಾಗಿ ವ್ಯಾಪಕ ಖರ್ಚು ಮಾಡಿದ್ದಾನೆ. ನೂರಾರು ಮಂದಿ ವಾಸ್ತುಶಿಲ್ಪಿಗಳ ನೇತೃತ್ವದಲ್ಲಿ ಸಾವಿರಾರು ಮಂದಿ ಕಾರ್ಮಿಕರು ಈ ಮಸೀದಿಯ ನಿರ್ಮಾಣ ಮತ್ತು ಅಲಂಕಾರಕ್ಕಾಗಿ ತಮ್ಮ ರಕ್ತ–ಬೆವರು ಬಸಿದು ದುಡಿದಿದ್ದಾರೆ. ಆಮೇಲಷ್ಟೇ ಈ ಮಸೀದಿಗೆ ಬಹಳ ವಿರಳ ಕಟ್ಟಡಗಳಿಗೆ ದೊರೆಯುವಂತಹ ಸ್ಥಾನವು ದೊರೆಯಿತು.

ಅಝ್ಝುಹ್ರಾ ನಗರದ ನಿರ್ಮಾಣ: ಹಿಜರಿ 325ರಲ್ಲಿ ಅಬ್ದುರ್ರಹ್ಮಾನ್ ನಾಸಿರ್ ಕಟ್ಟಿಸಿದನು. ಆತನು ಅದರ ನಿರ್ಮಾಣಕ್ಕಾಗಿ ಆಫ್ರಿಕಾ, ರೋಮ್ ಮತ್ತು ಕಾನ್‌ಸ್ಟಾಂಟಿನೋಪಲ್‌ಗಳಿಂದ ಅಮೃತಶಿಲೆಗಳನ್ನು ತರಿಸಿದನು. ಈ ನಗರದಲ್ಲಿ ಮೂನಿಸ್ ಮಹಲನ್ನು ಕಟ್ಟಿಸಿದನು. ಅದರಲ್ಲಿ ಅಮೃತ ಶಿಲೆಯಿಂದ ಕೊಳವನ್ನು ನಿರ್ಮಿಸಿದನು. ಅದರಲ್ಲಿ ಜೀವಿಗಳ ಚಿತ್ರವನ್ನು ಬಿಡಿಸಲಾಗಿತ್ತು. ಅದಂತೂ ಇಸ್ಲಾಮಿನಲ್ಲಿ ತೀರಾ ನಿಷಿದ್ಧವಾಗಿದೆ.

ಒಟ್ಟಿನಲ್ಲಿ ಈ ನಗರಕ್ಕಾಗಿ ಅವನು ಕೋಟ್ಯಂತರ ಹಣವನ್ನು ವ್ಯಯಿಸಿದ್ದನು. ಅದರ ನಿರ್ಮಾಣ ಕಾರ್ಯವು ನಲ್ವತ್ತು ವರ್ಷಗಳ ವರೆಗೆ ಮುಂದುವರಿದಿತ್ತು. ಇಪ್ಪತ್ತೈದು ವರ್ಷ ಅವನ ಜೀವಿತದಲ್ಲಿ ಮತ್ತು ಹದಿನೈದು ವರ್ಷ ಅವನ ಬಳಿಕ ಕಳೆಯಿತು. ದಿನನಿತ್ಯವೂ ಹತ್ತು ಸಾವಿರ ಮಂದಿ ಕಾರ್ಮಿಕರು ಅದಕ್ಕಾಗಿ ಕೆಲಸ ಮಾಡುತ್ತಿದ್ದರು. ಅದರಲ್ಲಿ ರಾಜ ಮನೆತನದ ಅಧಿಕಾರಿಗಳ ದೊಡ್ಡ ದೊಡ್ಡ ಮಹಲುಗಳು ಮತ್ತು ನೌಕರರಿಗೆ ಮನೆಗಳು ಹಾಗೂ ಸರಕಾರಿ ಕಚೇರಿಗಳಿದ್ದುವು. ಅಲ್ಲಿ ಒಂದು ಮೃಗಾಲಯವೂ ಇತ್ತು. ಅದರಲ್ಲಿ ತರತರದ ಪ್ರಾಣಿಗಳು ಸುತ್ತಾಡುತ್ತಿದ್ದುವು. ನಗರದ ಜನರು ಇಲ್ಲಿಗೆ ವಿಹಾರಕ್ಕೆಂದು ಬರುತ್ತಿದ್ದರು.

ಅಝ್ಝುಹ್ರಾ ನಗರದ ಮಹಲುಗಳ ನಿರ್ಮಾಣವು ಮುಗಿದ ಬಳಿಕ ಜನರು ಖಲೀಫನಿಗೆ ಶುಭಾಶಯ ಕೋರಿದರು. ಅಂದು ಶುಕ್ರವಾರವಾಗಿತ್ತು. ಮಸೀದಿಯಲ್ಲಿ ಜನರೆಲ್ಲ ನಮಾಝ್‌ಗೆ ನೆರೆದಿದ್ದರು. ಖುತ್ಬಾ ನೀಡಿದ ಕಾಝೀ ಮುಂದಿರ್‌ರವರು ತಮ್ಮ ಪ್ರವಚನದಲ್ಲಿ ಅಬ್ದುರ್ರಹ್ಮಾನನ ದುಂದುವ್ಯಯದ ಕುರಿತು ವಿಮರ್ಶಿಸಿದರು ಹಾಗೂ ಬಹಳವಾಗಿ ಟೀಕಿಸಿದರು. ಕಾಝೀ ಮುಂದಿರ್‌ರವರು ಸತ್ಯವನ್ನು ವ್ಯಕ್ತಪಡಿಸುವಲ್ಲಿ ಎಂದೂ ಹಿಂಜರಿಯದಂತಹ ಧೀಮಂತರಾಗಿದ್ದರು. ಅಬ್ದುರ್ರಹ್ಮಾನ್ ಕೂಡ ಓರ್ವ

www.uzairfalahi.com

ನ್ಯಾಯವಂತ ಆಡಳಿತಗಾರನಾಗಿದ್ದ ಮತ್ತು ಅವನು ಮುಂದಿರ್‌ರಂಥವರನ್ನು ಕಾಝಿಯನ್ನಾಗಿ ನೇಮಿಸಲು ಕಾರಣ, ಅವರು ನ್ಯಾಯ–ಸಮಾನತೆಗೆ ಸಂಬಂಧಿಸಿ ಯಾರಿಗೂ ಭಯಪಡುವುದಿಲ್ಲ ಎಂಬುದಾಗಿತ್ತು. ಆದ್ದರಿಂದಲೇ ಅವನು ಕಾಝಿಯವರ ಮಾತುಗಳನ್ನು ಸಹನೆಯಿಂದ ಆಲಿಸಿದನು ಮತ್ತು ತನ್ನ ತಪ್ಪುಗಳನ್ನು ನೆನೆದು ಅಳತೊಡಗಿದನು.

ಅಲ್ ಹಮ್ರಾ ಮಹಲಿನ ನಿರ್ಮಾಣ: ನಿರ್ಮಾಣ ಕಲೆಯಲ್ಲಿ ಗ್ರೆನೆಡಾದ ಸುಲ್ತಾನರು ಮತ್ತು ಕಾರ್ಮಿಕರ ಅತ್ಯಂತ ಮನೋಹರವಾದ ಕಟ್ಟಡವು ಅಲ್ ಹಮ್ರಾ ಆಗಿದೆ. ಈ ಮಹಲು ಮತ್ತು ಇದರ ತೋಟಗಳು ಸ್ವರ್ಗಸದೃಶವೆಂದು ಬಣ್ಣಿಸಲ್ಪಡುತ್ತಿದ್ದುವು. ಅದು ಸ್ಪಾನಿಶ್ ಮುಸ್ಲಿಮರ ನಿರ್ಮಾಣ ಕಲೆಯ ಅತ್ಯುತ್ತಮ ಉದಾಹರಣೆಯಾಗಿದೆ. ಭಾರತದ ಪುರಾತನ ಕಟ್ಟಡಗಳಲ್ಲಿ ತಾಜ್ ಮಹಲಿಗೆ ಇರುವಂತಹುದೇ ಸ್ಥಾನಮಾನವು ಸ್ಪೈಯಿನಿನ ಅಲ್ ಹಮ್ರಾಗಿದೆ. ಅದನ್ನು ವೀಕ್ಷಿಸಲಿಕ್ಕೆಂದೇ ಜಗತ್ತಿನಾದ್ಯಂತದಿಂದ ಪ್ರವಾಸಿಗಳು ಗ್ರೆನೆಡಾವನ್ನು ಸಂದರ್ಶಿಸುತ್ತಾರೆ ಹಾಗೂ ಅದನ್ನು ನಿರ್ಮಿಸಿದ ಕಾರ್ಮಿಕರನ್ನು ಹೊಗಳದೆ ಮರಳುವುದಿಲ್ಲ.

ಪಶ್ಚಿಮದ ದೇಶಗಳ ಪ್ರಮುಖ ನಿರ್ಮಾಣ ಕೇಂದ್ರಗಳು ಸೆವಿಲ್ಲಾ, ಮೊರೊಕ್ಕೋ, ಗ್ರೆನೆಡಾ ಮತ್ತು ಪರ್ಶಿಯಗಳಾಗಿವೆ. ಅವಲ್ಲದೆ ಇಸ್ಲಾಮೀ ಸಂಸ್ಕೃತಿಯ ಅನೇಕ ಸ್ಮರಣೀಯ ಕಟ್ಟಡಗಳಿವೆ.

ಫಾತಿಮಿಯ್ಯ ಕಾಲದ ನಿರ್ಮಾಣ ಕಲೆ ಮತ್ತು ಕಟ್ಟಡಗಳು

ಫಾತಿಮಿಯ್ಯರು ಕೂಡ ಅನೇಕ ನಿರ್ಮಾಣಗಳನ್ನು ಬಿಟ್ಟು ಹೋಗಿದ್ದಾರೆ. ಆ ಪೈಕಿ ಕೆಲವು ಪ್ರಕಾರ ಇವೆ:

ಕೈರೋ ನಗರ ನಿರ್ಮಾಣ: ಜೌಹರ್ ಅಸ್ಸಖಲಿಯು ಹಿಜರಿ 385ರಲ್ಲಿ ಫುಸ್ತಾತ್ ನಗರವನ್ನು ವಶಪಡಿಸಿದಾಗ, ಅವನು ಕೈರೋ ನಗರವನ್ನು ನಿರ್ಮಿಸುವ ಯೋಜನೆ ಹಾಕಿದನು. ಅದರ ನೀಲ ನಕಾಶೆಯು ಪ್ರಾರಂಭದಲ್ಲಿ ಚೌಕಾಕಾರದಲ್ಲಿತ್ತು ಹಾಗೂ ಅದರ ವಿಸ್ತೀರ್ಣವು 340 ಎಕರೆಯಷ್ಟಿತ್ತು. ನಗರದ ಆವರಣ ಗೋಡೆಗಳನ್ನು ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿತ್ತು. ನಗರದ ಮುಖ್ಯಭಾಗದಲ್ಲಿ ಎರಡು ಮಹಲುಗಳಿದ್ದುವು. ಒಂದು ಪೂರ್ವದ ದೊಡ್ಡ ಮಹಲು ಮತ್ತು ಇನ್ನೊಂದು ಪಶ್ಚಿಮದ ಸಣ್ಣ ಮಹಲಾಗಿತ್ತು. ಆ ಎರಡು ಮಹಲುಗಳ ನಡುವೆ ಸೇನೆಗೆ ಕವಾಯತು ನಡೆಸಲು ಒಂದು ದೊಡ್ಡ ಮೈದಾನವಿತ್ತು. ಇದು ಫಾತಿಮಿಯ್ಯಾ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ನಗರದ ಆವರಣ ಗೋಡೆಗಳಲ್ಲಿ ಅನೇಕ ಕಬ್ಬಿಣದ ಬಾಗಿಲುಗಳಿದ್ದುವು. ಆ ಪೈಕಿ ಎರಡು ಬಾಗಿಲುಗಳು ಈಗಲೂ ಉಳಿದಿವೆ. ಈ ನಗರವು ಫಾತಿಮಿಯ್ಯಾ ಸಾಮ್ರಾಜ್ಯದ ಸಮರ ನಿರ್ಮಾಣ ಕಲೆಯ ಒಂದು ಹೆಗ್ಗುರುತಾಗಿದೆ.

ಜಾಮಿಅ ಅಝ್ಹರ್: ಕೈರೋದಲ್ಲಿರುವ ಈ ಮಸೀದಿಯು ಹಿಜರಿ 263ರಿಂದ 265ರ ಅವಧಿಯಲ್ಲಿ ನಿರ್ಮಾಣಗೊಂಡಿತು. ಆದರೆ ಅದರ ಮಿನಾರವು ಹಿಜರಿ 696ರಲ್ಲಿ ನಿರ್ಮಾಣಗೊಂಡಿತ್ತು. ಈ ಮಸೀದಿಯು ಈಜಿಪ್ತ್ ಮತ್ತು ಇಸ್ಲಾಮೀ ಜಗತ್ತಿನಲ್ಲಿ ಮುಸ್ಲಿಮರ ಆರಂಭಿಕ ನಿರ್ಮಾಣ ಕಲೆಯ ಪ್ರಮುಖ ಅವಿಸ್ಮರಣೀಯ ಮಸೀದಿಯಾಗಿದೆ.

ಫಾತಿಮಿಯ್ಯರ ಮಹಲುಗಳು: ಫಾತಿಮಿಯರು ಅನೇಕ ಮಹಲುಗಳನ್ನು ನಿರ್ಮಿಸಿದ್ದಾರೆ. ಅವುಗಳ ಪೈಕಿ ಈ ಕೆಳಗಿನವು ಪ್ರಮುಖವಾಗಿವೆ –

www.ujirfalahi.com

1. **ಪೂರ್ವದ ಮಹಲು:** ಈ ಮಹಲನ್ನು ಜೌಹರ್ ಅಸ್ಸಕಲೀಯು ಫಾತಿಮೀ ರಾಜ ಅಲ್ ಮುಇಝ್ಝ್‌ಗಾಗಿ ಕಟ್ಟಿಸಿದ್ದನು. ಹಾಗಾಗಿಯೇ ಇದನ್ನು ಮುಅಝ್ಝೀ ಮಹಲು ಎಂದು ಹೇಳಲಾಗುತ್ತದೆ. ಇದರಲ್ಲಿ ನಾಲ್ಕು ಸಾವಿರ ಕೋಣೆಗಳು ಮತ್ತು ಅನೇಕ ಬಾಗಿಲುಗಳಿದ್ದುವು ಎಂದು ಹೇಳಲಾಗುತ್ತದೆ.

2. **ಪಶ್ಚಿಮದ ಮಹಲು:** ಇದನ್ನು ರಾಜ ಅಲ್ ಅಝೀಝ್ ಬಿಲ್ಲಾಹನು ಕಟ್ಟಿಸಿದ್ದನು.

ಇದೇ ರೀತಿ ಫಾತಿಮಿಯ್ಯರು ಕೂಡ ಮಹಲುಗಳ ನಿರ್ಮಾಣದಲ್ಲಿ ಅಪಾರ ಹಣವನ್ನು ವ್ಯಯಿಸಿದ್ದಾರೆ ಎಂದು ನಮಗೆ ತಿಳಿದು ಬರುತ್ತದೆ.

* * * * *

www.uzairfalahi.com